

ಕಲ್ಪನೆ ಕಾವ್ಯ

## ಹೂ ಹುಡುಗಿಯರು

ಹೂವಿಗಾಗಿ ಕೈಚಾಚಿರುವ
ಹೂವಿನಂಥ ಹುಡುಗಿಯರು

ಕಂಗಳಲ್ಲಿ ಹೂಬಣ್ಣ
ಉಸಿರಲ್ಲಿ ಹೂಗಂಧ
ಮುಖದಲ್ಲಿ ಹೂನಗೆ
ಎದೆಯಲ್ಲಿ ಹೂಮನಸು ಹೊತ್ತ
ಹೂವಿನಂಥ ಚೆಲುವಿಯರು

ಎಟುಕದೆ ಕೈಗೆ ಹೂಗೊಂಚಲು?
ಬೇಕಿದೆಯೇ ಗುಲಾಬಿ ಬಣ್ಣ
ಪ್ರೀತಿಯಂತೆ ಹಂಚಲು?

ದೂರ ಸರಿಸಿ ಅಡೆತಡೆಗಳನು
ಇನ್ನಷ್ಟು,
ಬೆಳೆಯಿರಿ ಎತ್ತರಕೆ ಮತ್ತಷ್ಟು
ಆಯ್ದುಕೊಳ್ಳಿ ಹೂಗಳನ್ನು
ಬೇಕಷ್ಟು

ನಿಲ್ಲಬೇಡಿ ಅಷ್ಟಕ್ಕೆ
ಹವಣಿಸಿರಿ ಹೆಚ್ಚಿನದಕೆ
ಬೆಳೆದು ಬಾನೆತ್ತರಕೆ

ಬಾಚಿಕೊಳ್ಳಿ ಬೊಗಸೆಯಲ್ಲಿ
ಮಿನುಗು ಚುಕ್ಕಿಗಳನ್ನು
ನಿಮ್ಮಿಷ್ಟದಂತೆ

**-ಆನಂದ ಮೆಣಸಿ, ಬೆಳಗಾವಿ**

## ಗುಲಾಬಿ ಚಿತ್ತಾರ

ಹಸಿರು ಎಲೆ ಕಾಣದ
ರೆಂಬೆ ಕೊಂಬೆಗಳು
ಇಂಬಾಗಿ ಹರಡಿ
ರಂಗಿನ ಲೋಕ ಸೃಷ್ಟಿಯಾಗಿತ್ತು

ತಂಗಾಳಿಯ ಬೀಸಣಿಕೆಗೆ
ಬಾಗಿ ತೊನೆದಾಡಿ
ನೆಲದ ಚಿತ್ತಾರಕ್ಕೆ
ನಗೆ ಬೀರಿದ ಕಿನ್ನರಿಯರು

ಗುಲಾಬಿ ಬಣ್ಣ ತುಂಬಿತು ಕಣ್ಣ
ಗಂಧರ್ವ ಲೋಕ ಧರೆಗಿಳಿದಂತೆ
ಕೈತುಂಬಾ ಅರಳಿದ ಹೂಗಳು
ಮಕ್ಕಳಿಗೆ ಖುಷಿಯ ಕ್ಷಣಗಳು

ಏಟುಕದ ಹೂವಿಗಾಗಿ
ಜಿಗಿದು ಕುಣಿದು
ಸಿಕ್ಕಿ ತೆಂದು ಹಿಡಿಕೆ ತುಂಬಾ
ಹಿಡಿದು ನಲಿದರು

**-ಲಲಿತಾ ಪಾಟೀಲ, ಧಾರವಾಡ**